**ಕರ್ನಾಟಕ ಸರ್ಕಾರ**

ಕ್ರಮಾಂಕ : ಡಿಪಿಎಆರ್ 227 ಕೆಓಎಲ್ 92

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 24ನೇ ಆಗಸ್ಟ್ 1992.

**ಸುತ್ತೋಲೆ**

ವಿಷಯ :- ಆದೇಶಗಳು, ಸುತ್ತೋಲೆ, ಅಧಿಸೂಚನೆ ಮುಂತಾದವುಗಳ ಪ್ರತಿಗಳನ್ನು ಸಚಿವಾಲಯದ ಮಲ್ಟಿಗ್ರಾಫ್ ಶಾಖೆ ಹಾಗೂ ಪ್ರತಿ ಇಲಾಖೆಯ ಸ್ವೀಕೃತಿ ಮತ್ತು ರವಾನೆ ಶಾಖೆಯವರು ತಪ್ಪದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಪ್ರತಿದಿನ ಒದಗಿಸುವುದು.

ಉಲ್ಲೇಖ :- 1) ಸುತ್ತೋಲೆ ಕ್ರಮಾಂಕ : ಡಿಪಿಎಆರ್ 128 ಕೆಓಎಲ್ 86, ದಿನಾಂಕ : 27-11-1986

2) ಅಧಿಸೂಚನೆ ಕ್ರಮಾಂಕ : ಡಿ.ಪಿ.ಎ.ಆರ್ 18 ಕೆ.ಒ.ಎಲ್. 92, ದಿನಾಂಕ : 6-2-1992.

ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಅಧ್ಯಕ್ಷರಿಗೆ (1) ಸಚಿವಾಲಯದ ಬಹುಪ್ರತಿ (ಮಲ್ಟಿಗ್ರಾಫ್) ಶಾಖೆಯವರು, ಆ ಶಾಖೆಗೆ ಬಹುಪ್ರತಿಯಾಗಿ ಬರುವ ಎಲ್ಲಾ ನಡವಳಿಕೆ, ಪರಿಪತ್ರ, ಸ್ಟೇಟ್‌ಮೆಂಟ್, ಇತ್ಯಾದಿಗಳ ಪ್ರತಿಯೊಡನೆ ಒಂದೊಂದು ಪ್ರತಿಯನ್ನು ತೆಗೆದಿಟ್ಟು ಪ್ರತಿ ದಿವಸ ಕಳುಹಿಸಿಕೊಡಬೇಕೆಂದು, ಮತ್ತು (2) ಪ್ರತಿ ಇಲಾಖೆಯ ಸ್ವೀಕೃತಿ ಮತ್ತು ರವಾನೆ (ಆರ್ ಅಂಡ್ ಐ) ಶಾಖೆಯ ಶಾಖಾಧಿಕಾರಿಗಳು ಆ ಇಲಾಖೆಯಲ್ಲಿ ಹೊರಡುವ ಪ್ರತಿ ನಡವಳಿಕೆ, ಜಾಹೀರ್ನಾಮೆ, ಪರಿಪತ್ರ ಮುಂತಾದವುಗಳ (ಅವು ಕನ್ನಡದಲ್ಲಿಯೇ ಇರಲಿ ಅಥವಾ ಇಂಗ್ಲಿಷಿನಲ್ಲಿಯೇ ಇರಲಿ) ಒಂದೊಂದು ಪ್ರತಿಯನ್ನು ಕಡ್ಡಾಯವಾಗಿ ತೆಗೆದಿಟ್ಟು ಪ್ರತಿ ದಿವಸ ತಪ್ಪದೆ ಕಳುಹಿಸಿಕೊಡಬೇಕೆಂದು ಉಲ್ಲೇಖ (1) ರಲ್ಲಿನ ಸುತ್ತೋಲೆಯಲ್ಲಿ ಆದೇಶಿಸಲಾಗಿತ್ತು.

ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿಗೆ ಬದಲಾಗಿ ಉಲ್ಲೇಖ (2) ರಲ್ಲಿನ ಅಧಿಸೂಚನೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ಸಚಿವಾಲಯದ

ಎಲ್ಲಾ ಸ್ವೀಕೃತಿ ಮತ್ತು ರವಾನೆ (ಆರ್ ಅಂಡ್ ಐ) ಶಾಖೆಗಳು ಮತ್ತು ಸಚಿವಾಲಯದ ಬಹುಪ್ರತಿ (ಮಲ್ಟಿಗ್ರಾಫ್) ವಿಭಾಗವು ಸಹ ಪ್ರತಿದಿನ ಸುತ್ತೋಲೆ ಸಂಖ್ಯೆ : ಡಿಪಿಎಆರ್ 123 ಕೆಒಎಲ್ 86, ದಿನಾಂಕ 27-11-86ರಲ್ಲಿ ಸೂಚಿಸಿದಂತೆ ಎಲ್ಲಾ ನಡವಳಿಗಳು, ಪರಿಪತ್ರಗಳು, ಜಾಹಿರ್ನಾಮೆ ಇತ್ಯಾದಿಗಳ ಪ್ರತಿಗಳನ್ನು ತಪ್ಪದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಕಳುಹಿಸಿಕೊಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಸಹಿ/-

**(ಬಿ. ಪಾರ್ಥಸಾರಥಿ)**

ಸರ್ಕಾರದ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.